ಶ್ರೀ ವೀರಣ್ಣ (ಹೆಣಕಾಸು, ಸಣ್ಣ ಉಳಿತಾಯ ಮತ್ತು ಬಂದೀಖಾನೆಗಳು ರಾಜ್ಯ ಸಚಿವರು)—

ಅ) ೩೧–೧೨–೧೯೮೭ರ ವರೆಗೆ ಸಂಗ್ರಹಿಸಲಾದ ಸಣ್ಣ ಉಳಿತಾಯದ ಮೊಬಲಗು — ಒಟ್ಟು ... ರೂ. ೩೨೭.೧೪ ಕೋಟಿ.

ಆ) ಪ್ರಸಕ್ತ ಸಾಲಿನಲ್ಲಿ ನವೆಂಬರ್‌ವರೆವಿಗೂ ಬಿಡುಗಡೆ ಆದ ಮೊತ್ತ ರೂ. ೧೯ ಕೋಟಿ.

ಇ) ಇಂದಿರಾ ವಿಕಾಸ ಪತ್ರಗಳ ಮೂಲಕ ಡಿಸೆಂಬರ್ ಅಂತ್ಯದವರೆಗೆ ೫೨.೦೩ ಕೋಟಿ ಹಣ ಸಂಗ್ರಹಿಸಲಾಗಿದೆ.

ಈ) ಇಂದಿರಾ ವಿಕಾಸ ಪತ್ರಗಳಲ್ಲಿ ಸಂಗ್ರಹಿಸಲಾದ ಹಣಕ್ಕೆ ಪ್ರತ್ಯೇಕವಾಗಿ ಹಣ ಬಿಡುಗಡೆ ಮಾಡುವುದಿಲ್ಲ.

ಮಾಜಿ ಶಾಸಕರಿಗೆ ಆಗಂತ್ತಿರುವ ತೊಂದರೆಯ ಬಗ್ಗೆ.

೧೬೭. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಾನೂನು ಮಂತ್ರಿ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸ್ತವರೇ ?

ಅ) ಮಾಜಿ ಶಾಸಕರಿಗೆ ರಾಜ್ಯದಲ್ಲಿ ಸಂಚರಿಸಲು ಬಸ್ ಪಾಸ್ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಆ) ಅವರಿಗೆ ವೈದ್ಯಕೀಯ ಸೌಲಭ್ಯವನ್ನು ಕೊಡುವ ಬಗ್ಗೆ ಸರ್ಕಾರದ ನಿಲುವೇನು ?

ಇ) ಮಾಜಿ ಶಾಸಕರಿಂದ ಹಾಗೂ ಇತರರಿಂದ ಈ ಬಗ್ಗೆ ಸರಕಾರಕ್ಕೆ ಮನವಿಗಳು ಬಂದಿರುವುದ ನಿಜವೆ ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು) —

ಅ) ವಿಶೇಷ ಮಂಡಲಿ. ಕರ್ನಾಟಕ ವಿಧಾನ ಮಂಡಲವು, ದಿನಾಂಕ ೨೧–೧–೧೯೮೬ರಂದು ನಡೆದ ಸಭೆಯಲ್ಲಿ ಮಾಜಿ ಶಾಸಕರಿಗೆ ಬಸ್ ಪಾಸುಗಳನ್ನು ಮತ್ತು ವೈದ್ಯಕೀಯ ಸೌಲಭ್ಯಗಳನ್ನು ನೀಡಲು ಇದು ಸೂಕ್ತ ಸಮಯವಲ್ಲವೆಂದು ನಿರ್ಧರಿಸಿದೆ.

ಆ) – ಡಿಟೋ –

ಇ) ನಿಜ.

ಹೆರಿಗೆ ಭತ್ಯೆ ಮತ್ತು ಆರೋಗ್ಯ ಮಾರ್ಗದರ್ಶಕರಿಗೆ ಕೊಟ್ಟ ಗೌರವಧನ.

೫೦೩. ಶ್ರೀಮತಿ ಸುಮಾವಸಂತ(ವಿರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯಲ್ಲಿ ಇಲಾಖೆ ಪತಿಯಿಂದ ಬಟವಾಡೆಯಾದ (೧) ಹೆರಿಗೆ ಭತ್ಯೆ (೨) ಆರೋಗ್ಯ ಮಾರ್ಗದರ್ಶಕರಿಗೆ ಕೊಟ್ಟ ಗೌರವಧನ ಒಟ್ಟು ಮೊತ್ತವೆಷ್ಟು ?

ಆ) ಇವರೆಡೂ ಸರಿಯಾಗಿ ಫಲಾನುಭವಿಗಳಿಗೆ ಹಾಗೂ ಮಾರ್ಗದರ್ಶಕರಿಗೆ ಸೇರುತ್ತಿಲ್ಲವೆಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಫಲಾನುಭವಿಗಳಿಗೆ ಹೆರಿಗೆ ಭತ್ಯೆ ಕೊಡುವಾಗ ಸಂಬಂಧಪಟ್ಟ ಆರೋಗ್ಯ ಘಟಕ ಹಾಗೂ ಕೊಡುವ ವಿಧಾನ ಚೆಕ್ ಮೂಲಕ ಎಂಬ ಆದೇಶ ಸರ್ಕಾರ ಮಾಡಿದೆ ಇದ್ದು, ಇದರಿಂದ ಫಲಾನುಭವಿಗಳಿಗೆ ಬಟವಾಡೆ ಆಗದೇ ಇರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಇನ್ನು ಮುಂದಾದರೂ ಬಟವಾಡೆ ಕ್ರಮ ಬದಲಾಯಿಸಿ ಸಂಬಂಧಿಸಿದ ಆರೋಗ್ಯ ಘಟಕ ಹಾಗೂ ಚೆಕ್ ಮುಖಾಂತರ ಬಟವಾಡೆ ಆದೇಶವನ್ನು ಸರಕಾರ ಕೊಡಲೇ ಹೊರಡಿಸುವುದೇ ?

ಶ್ರೀ ಬಿ. ಬಸವಣ್ಣಪ್ಪ(ಸಮಾಜ ಕಲ್ಯಾಣ ಸಚಿವರು).—

ಅ) ೧-೪-೧೯೮೪ ರಿಂದ ೩೧-೧೦-೧೯೮೭ರವರೆಗೆ ೬೯೭೨ ಮಂಜೆಳಯರು ಈ ಹೆರಿಗೆ ಭತ್ಯೆ ಸೌಲಭ್ಯ ಪಡೆದು ಕೊಂಡಿದ್ದು ಇಲಾಖೆಯತಿಯಿಂದ ೨೦,೯೧,೬೦೦-೦೦ ರೂ. ಗಳು ಬಟವಾಡೆಯಾಗಿದೆ.

	೧೯೮೬-೮೭	೧೯೮೭-೮೮
	ರೂ.	ರೂ.
ಆರೋಗ್ಯ ಮಾರ್ಗದರ್ಶಿಕರಿಗೆ ಕೊಟ್ಟ ಗೌರವಧನ	೧,೬೦,೬೫೦	೧,೦೬,೨೫೦

ಆ) ಬಂದಿಲ್ಲ.

ಇ) ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಣ ವಂಜೂರಾತಿ ಮಾಡುವರಿಂ ಚೆಕ್ ಮೂಲಕ ಹೆರಿಗೆ ಭತ್ಯೆ ಕೊಡುತ್ತಿಲ್ಲ ಹಣವನ್ನು ಬಟವಾಡೆ ಮಾಡಲಾಗುತ್ತಿದೆ. ಫಲಾನಂಭವಿಗಳಿಗೆ ಈ ವ್ಯವಸ್ಥೆಯಿಂದ ಹಣ ಬಟವಾಡೆಯಾಗುತ್ತಿಲ್ಲವೆಂಬ ದೂರು ನಮಗೆ ಬಂದಿಲ್ಲ.

ಈ) ಚೆಕ್ ಮೂಲಕ ಹಣ ವಿತರಣೆ ಮಾಡುವ ಅಗತ್ಯದ ಬಗ್ಗೆ ಪರಿಶೀಲಿಸಲಾಗುವುದು.

ಬನಹಟ್ಟಿ–ಮಂಧೋಳ ಆಸ್ಪತ್ರೆ ಕ್ಷ–ಕಿರಣ ಯಂತ್ರ.

೧೯೫. ಶ್ರೀ ಬಾಬುರೆಡ್ಡಿ ವಿ. ತುಂಗಳ (ಬೀಳಗಿ).—ಮಾನ್ಯ ಆರೋಗ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಬಿಜಾಪುರ ಜಿಲ್ಲೆಯ ಮುಂಧೋಳ ಮತ್ತು ಬನಹಟ್ಟಿಗಳಲ್ಲಿರುವ ಸರ್ಕಾರೀ ಆಸ್ಪತ್ರೆಗಳಲ್ಲಿ ಕ್ಷ–ಕಿರಣ ಯಂತ್ರಗಳಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಆ) ಈ ಕ್ಷ–ಕಿರಣ ಯಂತ್ರಗಳು ನಿಷ್ಕ್ರಿಯವಾಗಿರುವುದಕ್ಕೆ ಕಾರಣವೇನು ?

ಇ) ಇಲ್ಲಿಯವರೆಗೂ ಕ್ಷ–ಕಿರಣ ಸಿಬ್ಬಂದಿ ಇರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಬಿ. ರಾಚಯ್ಯ(ಆರೋಗ್ಯ ಮಂತ್ರಿಗಳು).—

ಅ) ತಿಳಿದಿದೆ.

ಆ) ಮುಂಧೋಳ ಇಲ್ಲಿನ ಕ್ಷ–ಕಿರಣ ಯಂತ್ರವು ಕೆಲಸ ಮಾಡುತ್ತಿದೆ. ಬನಹಟ್ಟಿ–ಇಲ್ಲಿಯ ಕ್ಷ-ಕಿರಣ ಯಂತ್ರವನ್ನು ದುರಸ್ತಿಗೊಳಿಸಲಿಕ್ಕಾಗುವುದಿಲ್ಲವಾದ್ದರಿಂದ ಇದನ್ನು ನಿರುಪಯುಕ್ತಗೊಳಿಸ ಬೇಕಾಗಿದೆ.

ಇ) ಮುಧೋಳದಲ್ಲಿ ಕ್ಷ–ಕಿರಣ ತಜ್ಞರು ಇರುವರು

ಈ) ಬನಹಟ್ಟಿ ಇಲ್ಲಿಗೆ ಹೊಸ ಕ್ಷ–ಕಿರಣ ಯಂತ್ರ ಒದಗಿಸಿದ ನಂತರ ತಜ್ಞರನ್ನು ನೇಮಕಾತಿ ಮಾಡುವ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗುವುದು.

ಸುವಿಹಾರಿ ಬಸ್‌ಗಳಿಗೆ ವಿಶೇಷ ಸೌಕರ್ಯ.

೬೮. ಶ್ರೀ ಬಾಬುರೆಡ್ಡಿ ತುಂಗಳ(ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪರವಾಗಿ ಓಡುತ್ತಿರುವ ಸುವಿಹಾರಿ ಬಸ್‌ಗಳ ಸಂಖ್ಯೆ ಎಷ್ಟು ?